ಓ.ಎಸ್ **232/2013**

ಪಿ.ಡಬ್ಲೂ.-**1**

ದಿನಾಂಕಃ **25.04.2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಹೆಚ್ಚುವರಿ ವಿವಾದಾಂಶದ ಮೇಲೆ ಪಾಟೀಸವಾಲು ಪ್ರತಿವಾದಿ ಪರ K.S. ವಕೀಲರಿಂದಃ**

ರತ್ನಮ್ಮ, ಗೀತಾ ಹಾಗೂ ಸವಿತಾ ಎಂಬುವವರು ಏನಾಗಬೇಕು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವೆಂಕಟಮ್ಮ ನನ್ನ ತಾಯಿ. ಸದರಿಯವರ ವಿರುದ್ಧ ರತ್ನಮ್ಮ ಬಿನ್ ವೆಂಕಟಶೆಟ್ಟಿ ರವರು ಅಸಲು ದಾವೆ ನಂ.379/2012 ರಂತೆ ದಾವೆ ಹೂಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ನನ್ನ ತಾಯಿಗೆ ಸಮನ್ಸ್ ಬಂದ ಬಗ್ಗೆ ನನಗೆ ಗೊತ್ತಿಲ್ಲ. ಪ್ರಸ್ತುತ ದಾವೆಯನ್ನು ಸ.ನಂ.62, ವಿಸ್ತೀರ್ಣ 5 ಎಕರೆ 12 ಗುಂಟೆಗೆ ಹೂಡಿರುತ್ತೀರಿ ಎಂದರೆ ಸರಿ. ಪ್ರಸ್ತುತ ದಾವೆಯನ್ನು ಹೂಡಿದ ನಂತರ ಪ್ರತಿವಾದಿ ನಂ.10 ರಿಂದ 14 ರವರು ದಾವೆಯಲ್ಲಿ ಪಕ್ಷಗಾರರಾಗಿ ಸೇರ್ಪಡೆಯಾಗಿರುತ್ತಾರೆಂದರೆ ಸರಿ. ಪ್ರತಿವಾದಿ ನಂ.10 ರಿಂದ 14 ರವರು ಸಹ ಅಸಲು ದಾವೆ ನಂ.379/2012 ರಲ್ಲಿ ಪಕ್ಷಗಾರರಾಗಿರುತ್ತಾರೆಂದರೆ ಸಾಕ್ಷಿ ನನಗೆ ಗೊತ್ತಿಲ್ಲ. ಪ್ರಸ್ತುತ ದಾವೆಯನ್ನು ಹೂಡುವ ಸಮಯದಲ್ಲಿ 10 ರಿಂದ 14 ನೇ ಪ್ರತಿವಾದಿಗಳನ್ನು ಬಿಟ್ಟು ದಾವೆ ಹೂಡಿರುತ್ತೇನೆಂದರೆ ಸರಿ. ದಾವೆಯಲ್ಲಿ 9 ನೇ ಪ್ರತಿವಾದಿಯನ್ನು ಯಾವ ಕಾರಣಕ್ಕಾಗಿ ಪಕ್ಷಗಾರರಾಗಿ ಮಾಡಿರುತ್ತೀರಾ ಎಂದರೆ ಸಾಕ್ಷಿ ಭೋಗ್ಯ ಮಾಡಿದ ಕಾರಣ ಅವರನ್ನು ಪಕ್ಷಗಾರರಾಗಿ ಮಾಡಿರುತ್ತೇವೆ. ಸದರಿ ಭೋಗ್ಯವನ್ನು ಯಾರಿಗೆ ಮಾಡಿದ್ದರು ಎಂದರೆ ಸಾಕ್ಷಿ 1 ನೇ ಪ್ರತಿವಾದಿಗೆ ಎಂದು ನುಡಿಯುತ್ತಾರೆ. 9 ನೇ ಪ್ರತಿವಾದಿಗೆ ಭೋಗ್ಯ ಮಾಡಿಲ್ಲ ಎಂದರೆ ಸರಿ. 1 ನೇ ಪ್ರತಿವಾದಿ, 9 ನೇ ಪ್ರತಿವಾದಿಗೆ ಕ್ರಯ ಮಾಡಿರುವುದು ಎಂದರೆ ಸರಿ. ಸದರಿ ಕ್ರಯವನ್ನು ವಜಾ ಮಾಡಲು ಈ ದಾವೆಯಲ್ಲಿ ಕೋರಿರುತ್ತೇನೆಂದರೆ ಸರಿ. ಕ್ರಯವನ್ನು ವಜಾ ಮಾಡುವ ಕೋರಿಕೆಗೆ ನ್ಯಾಯಾಲಯದ ಶುಲ್ಕವನ್ನು ಪಾವತಿ ಮಾಡಿರುವುದಿಲ್ಲ ಎಂದರೆ ಸರಿ. ಭೋಗ್ಯ ಪತ್ರವನ್ನು ವಜಾ ಮಾಡಲು ಕೇಳಿರುವ ಕೋರಿಕೆಗೆ ನ್ಯಾಯಾಲಯದ ಶುಲ್ಕವನ್ನು ಪಾವತಿ ಮಾಡಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನನಗೆ ಶುಲ್ಕ ಎಂದರೆ ಏನು ಎಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಈ ದಾವೆಯನ್ನು ಭಾಗವನ್ನು ಹೂಡಿದ್ದ ಕಾರಣ ಸೋದರಮಾವನ ಮಕ್ಕಳಾದ 10 ರಿಂದ 14 ನೇ ಪ್ರತಿವಾದಿಗಳನ್ನು ಸೇರಿಸಿಲ್ಲದ ಕಾರಣ ಈ ದಾವೆ ಊರ್ಜಿತವಲ್ಲ ಎಂದರೆ ಸಾಕ್ಷಿ ಈಗ ಸೇರಿಸಿದ್ದೇವೆ ಎಂದು ನುಡಿಯುತ್ತಾರೆ. 10 ರಿಂದ 14 ನೇ ಪ್ರತಿವಾದಿಗಳು ಹಾಗೂ ನೀವು ಶಾಮೀಲಾಗಿ ಪ್ರಸ್ತುತ ದಾವೆಯನ್ನು ಹೂಡಿರುತ್ತೀರಾ

ಎಂದರೆ ಸರಿಯಲ್ಲ.

ರತ್ನಮ್ಮ ಬಿನ್ ವೆಂಕಟಶೆಟ್ಟಿ, ಗೀತಾ ಬಿನ್ ಶಾಂತಿ ಹಾಗೂ ಸವಿತಾ ರವರುಗಳನ್ನು ಉದ್ದೇಶಪೂರ್ವಕವಾಗಿ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸಾಕ್ಷಿ ಅವರು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವೆಯನ್ನು ಹೂಡಿದ ಕಾಲಕ್ಕೆ ದಾವಾ ಆಸ್ತಿಯ ಮಾರುಕಟ್ಟೆ ಬೆಲೆ 10 ಲಕ್ಷ ಇತ್ತು ಎಂದರೆ ಸರಿ. ದಾವೆಯನ್ನು ಹೂಡಿದ ಕಾಲಕ್ಕೆ ದಾವಾ ಆಸ್ತಿಯ ಮಾರುಕಟ್ಟೆ ಬೆಲೆ 1 ಎಕರೆಗೆ 10 ಲಕ್ಷ ಬೆಲೆ ಬಾಳುತ್ತಿತ್ತು ಎಂದರೆ ಸಾಕ್ಷಿ ಗೊತ್ತಿಲ್ಲ. ದಾವಾ ಆಸ್ತಿ ಮೈಸೂರು-ಬೆಂಗಳೂರು ಮುಖ್ಯರಸ್ತೆಯ ಪಕ್ಕದಲ್ಲಿದೆ ಎಂದರೆ ಸರಿ. ನ್ಯಾಯಾಲಯದ ಶುಲ್ಕವನ್ನು ಪಾವತಿ ಮಾಡಬೇಕಾಗುತ್ತದೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಿಮ್ಮ ತಾಯಿ ಅಸಲು ದಾವೆ ನಂ.379/2012 ರಲ್ಲಿ ಪಕ್ಷಗಾರರಾಗಿದ್ದು, ಅವರು ಬಂದು ಸಾಕ್ಷ್ಯ ನುಡಿದರೆ ಸತ್ಯಾಂತ ಹೊರಬರುತ್ತದೆಂದು ನೀವು ಸಾಕ್ಷ್ಯ ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ. ನಿಮಗೆ ಅಸಲು ದಾವೆ ನಂ.379/2012 ಹಾಗೂ ಪ್ರಸ್ತುತ ದಾವೆಯ ವಿಚಾರ ಗೊತ್ತಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಈ ದಾವೆ ಹೂಡುವ ಸಮಯದಲ್ಲಿ ಪಹಣಿ ತಮ್ಮ ಹೆಸರಿನಲ್ಲಾಗಲೀ, ತಮ್ಮ ತಾಯಿಯ ಹೆಸರಿನಲ್ಲಾಗಲೀ ಅಥವಾ ತಮ್ಮ ಮಾವನ ಹೆಸರಿನಲ್ಲಾಗಲೀ ಇರಲಿಲ್ಲ ಎಂದರೆ ಸರಿ. 1968 ರಿಂದಲೂ ಪಹಣಿ 1 ನೇ ಪ್ರತಿವಾದಿಯ ಹೆಸರಿನಲ್ಲಿದೆಂದರೆ ಸರಿ. 1 ನೇ ಪ್ರತಿವಾದಿ ದಾವಾ ಆಸ್ತಿಯನ್ನು 9 ನೇ ಪ್ರತಿವಾದಿಗೆ ಕ್ರಯ ಮಾಡಿದ ನಂತರ 9 ನೇ ಪ್ರತಿವಾದಿಯ ಹೆಸರಿನಲ್ಲಿ ಪಹಣಿ ಇದೆ ಎಂದರೆ ಸರಿ. ದಾವೆಯಲ್ಲಿ ಕೋರಿದ ಪರಿಹಾರ ಪಡೆಯಲು ನೀವು ಅರ್ಹರಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.